ಪರಮ ದಯಾಮಯನೂ ಕರುಣಾನಿಧಿಯು ಆದ ಅಲ್ಲಾಹನ ನಾಮದಿಂದ

# 2. ಎಲ್ಲರಿಗೂ ಉಪಯೋಗವಾಗುವಂತಹ ಸಂದೇಶ.

## ಸ್ನೇಹಿತ

ನೀ ಎಂದಾದರು ಈ ವಿಷಯದ ಕುರಿತು ನಿಜವಾಗಿ ಸ್ವಲ್ಪ ಹೊತ್ತು ಯೋಚನೆ ಮಾಡಿದ್ದಿ! ನೋ! ಭೌತಿಕವಾಗಿ ಈ ಪ್ರಪಂಚವು ಶರವೇಗದಿಂದ ಮುಂದೆ ಸಾಗುತ್ತಿದೆ ಈ ಪ್ರಪಂಚದಲ್ಲಿರುವ ಪ್ರತಿ ವಸ್ತುವು ಹಿಂದೆಂದೂ ಇಲ್ಲದಂತಹ ರೀತಿಯಲ್ಲಿ ಆಧುನಿಕರಿಸಲ್ಪಡುತ್ತಿದೆ. ಊಹಿಸಲಾರದಂತಹ ರೀತಿಯಲ್ಲಿ ಕಂಪ್ಯೂಟರಿಕರಣ ಮಾಡಲ್ಪಡುತ್ತಿದೆ. ಒಂದು ಕಾಲದಲ್ಲಿ ಭೂ ಮೇಲ್ಭಾಗದಲ್ಲಿ ನಿಂತು ಕತ್ತಲೆಯಲ್ಲಿ ಬೆಳದಿಂಗಳು ಚೆಲ್ಲುತ್ತಿರುವ ಸುಂದರವಾದ ಚಂದ್ರನನ್ನು ವಿಚಿತ್ರವಾಗಿ ನೋಡಿದನು ಮನುಷ್ಯ! ಅದೇ ಮನುಷ್ಯ ಈ ದಿನ ಚಂದ್ರ ಮಂಡಲದ ಮೇಲೆ ನಿಶ್ಚಿಂತೆಯಾಗಿ ಹೆಜ್ಜೆ ಇಡುತ್ತಿದ್ದಾನೆ. ಹೌದು! ಮಾನವನು ಪ್ರಗತಿ ಸಾಧಿಸಿದ್ದಾನೆ ವಿಪರೀತವಾಗಿ ಅಭಿವೃದ್ಧಿಯನ್ನು ಹೊಂದಿದ್ದಾನೆ. ಆದರೆ ನೀವು ಗಮನಿಸಿದ್ದಿರೋ ಇಲ್ಲವೊ! ಅದೇ ಸಮಯದಲ್ಲಿ ಮಾನವನು ಎಷ್ಟೋ ಅದೆಷ್ಟೋ ರೀತಿಯಲ್ಲಿ ನಿಸ್ಸಾಯಕನಾಗಿ ಬದಲಾಗುತ್ತಿದ್ದಾನೆ. ಒಂದು ಸಾರಿ ನಿಮ್ಮ ಪರಿಸರವನ್ನು ಪರೀಕ್ಷಿಸಿ ನೋಡಿರಿ. ಮನುಷ್ಯ ತನ್ನ ಜೊತೆಯಲ್ಲಿರುವ ಮನುಷ್ಯನಿಗೆ ಬದ್ಧ ಶತ್ರುವಾಗಿದ್ದಾನೆ. ಕೆಟ್ಟ ಚಟಗಳು ಅವನ ಅಭ್ಯಾಸವಾಗಿ ಬಿಟ್ಟಿದೆ. ಎಲ್ಲಾ ರೀತಿಯ ಸಾಮಾಜಿಕ ನೇರ-ಘೋರಗಳಿಗೆ ಅವನು ಬಲಿಯಾಗುತ್ತಿದ್ದಾನೆ. ಫಲಿತವಾಗಿ ಸಮಾಜದಲ್ಲಿ ದುರ್ಮಾರ್ಗವು ವಿಪರೀತವಾಗಿ ವ್ಯಾಪಿಸುತ್ತಿದೆ. ಕೊನೆಗೆ ಸದ್ಗುಣಕ್ಕೆ ಸ್ಥಾನವಿಲ್ಲದೆ ತಿಕ ಹಕ್ಕುಗಳಿಗೆ ಪ್ರಾಮುಖ್ಯತೆಯಿಲ್ಲದ ತರುಣವು ಸಂಭವಿ.

ಒಂದು ಕ್ಷಣ ನಿಲ್ಲಿರಿ! ನಿಮ್ಮ ಸುತ್ತಾ ಇರುವ ಪರಿಸರವನ್ನು ಪ್ರದೇಶವನ್ನು ಗಮನವಿಟ್ಟು ಪರಿಶೀಲಿಸಿ. ಸೂರ್ಯ, ಚಂದ್ರ, ನಕ್ಷತ್ರಗಳು, ಆಕಾಶ, ಗ್ರಹಗಳು, ಮರಗಳು, ಬೆಟ್ಟಗಳು ಎಲ್ಲಾವು ಒಂದೇ ಕ್ರಮ ಪದ್ದತಿಯಲ್ಲಿವೆ. ಆ ವ್ಯವಸ್ಥೆಯಲ್ಲಿ ಯಾವುದೇ ಲೋಪದೋಷವಿಲ್ಲ. ಏಕೆ ಗೊತ್ತಾ? ಅವು ತಮ್ಮ ಸೃಷ್ಟಿಕರ್ತನು ತಮಗಾಗಿ ನಿರ್ಣಯಿಸಿದ ಮಾರ್ಗವನ್ನು ಅನುಸರಿಸುತ್ತಿವೆ.ನಿಜ ದೇವನು ನಿರ್ದೇಶಿಸಿರುವ ಪ್ರಕೃತಿ ನಿಯಮಗಳಿಗೆ ವಿಧೇಯತೆ ತೋರುತ್ತಿವೆ. ಹಾಗಾದರೆ ವಾಸ್ತವವಾಗಿ ಅದನ್ನು ಸೃಷ್ಟಿಸಿರುವವನು, ನಮ್ಮನ್ನು ಸೃಷ್ಟಿಸಿದವನು ಒಬ್ಬನೇ.ನಮ್ಮ ದಾಹವನ್ನು ತೀರಿಸುವ ನೀರು ಒಂದೇ. ನಮ್ಮ ಹಸಿವನ್ನು ನೀಗಿಸುವ ಆಹಾರವು ಒಂದೇ. ನಾವು ಉಸಿರಾಡುವ ಗಾಳಿಯು ಒಂದೇ. ಮಾನವರಾಗಿರುವ ನಮ್ಮೆಲ್ಲರ ನರದಲ್ಲಿ ಪ್ರವಾಹಿಸುವ ರಕ್ತವು ಒಂದೇ. ನೇರವಾಗಿ ಹೇಳಬೇಕಾದರೆ ಆಕಾಶ ಮತ್ತು ಭೂಮಿಯೊಳಗಿರುವ ಎಲ್ಲಾ ಜೀವಿಗಳನ್ನು ಸೃಷ್ಟಿಸಿರುವ ಸೃಷ್ಟಿಕರ್ತನು ಒಬ್ಬನೇ!

ನಮ್ಮೆಲ್ಲರ ಸೃಷ್ಟಿಕರ್ತನು ಒಬ್ಬನೇ ಆಗಿರುವಾಗ, ಆ ಸೃಷ್ಟಿಕರ್ತನಿಗೆ ಸಂಬಂಧಿಸಿದ ಪ್ರಜೆಗಳಲ್ಲಿ ವಿವಿಧ ಭಾವನೆಗಳು ಹೇಗೆ ಹುಟ್ಟಿಬಂದವು? ದೇವನು ತನ್ನ ಬಗ್ಗೆ ಸ್ವಯವಾಗಿ ಅತ್ಯಂತ ಸ್ಪಷ್ಟವಾಗಿ ಹೇಳಿರುವಾಗ ಮಾನವರು ಮಿಥ್ಯಾದೇವರುಗಳನ್ನು ಆಶ್ರಯಿಸಿಬೇಕಾದ ಅವಶ್ಯವಾದರೂ ಎನಿತ್ತು? ಇಂತಹ ವಿಷಯಗಳು ವಿಚಾರವಂಥರಿಗೆ ಅನುಕ್ಷಣ ಪ್ರಶ್ನೆಗಳಾಗಿ ಕಾಡುತ್ತಿವೆ. ನಮ್ಮ ಮೆದುಳಿಗೆ ಸ್ವಲ್ಪ ಕೆಲಸ ಕೊಟ್ಟರೆ ಈ ಪ್ರಶ್ನೆಗಳಿಗೆ ಸಮಾಧಾನ ಸಿಗುವುದು ಎಷ್ಟು ಮಾತ್ರ ಕಷ್ಟಕರವಲ್ಲ! ಈ ವಿಷಯದ ಬಗ್ಗೆ ವಿಶ್ಲೇಷಿಸಬೇಕಾದರೆ ಮಾನವನು ದೇವನ ವಿಷಯದಲ್ಲಿ ಪೂರ್ಣವಾಗಿ ಜ್ಞಾನಿಯಾಗಿದ್ದಾನೆ. ಜಗತ್ತಿನಲ್ಲಿ ಹೆಜ್ಜೆ ಹೆಜ್ಜೆಗೂ ಬರುವಂತಹ ವಾಸ್ತವಗಳನ್ನು ಹಿಂದೆ ಸರಿಸಿ, ಕೇವಲ ಉಹಾಲೋಕದಲ್ಲಿ ವಿಹರಿಸುತ್ತಿದ್ದಾನೆ. ಸ್ಪಷ್ಟವಾಗಿರುವ ಸತ್ಯವನ್ನು ಬಿಟ್ಟು ಊಹೆಗಳನ್ನು ತಪ್ಪು ಕಲ್ಪನೆಗಳನ್ನು ಅನುಸರಿಸುತ್ತಿದ್ದಾನೆ.

## ಇನ್ನೊಂದು ವಿಷಯ ಗಮನಿಸಿರಿ!

ತಾಯಿ ಗರ್ಭದಿಂದ ಈ ಭೂಮಿಯ ಮೇಲೆ ಬರುವ ಮಗುವು ಮೊಟ್ಟ ಮೊದಲು ಈ ಲೋಕದಲ್ಲಿ ಏನು ಮಾಡುತ್ತದೆ?

**ಅಳುತ್ತದೆಯಾ...?**

**ಹಾಲು ಕುಡಿಯುತ್ತದೆಯಾ..?**

ಇಲ್ಲ! ಮೊಟ್ಟ ಮೊದಲು ಮಗು ಭೂಮಿಯ ಮೇಲೆ ಬಂದೊಡನೆ ಶ್ವಾಸ ತೆಗೆದುಕೊಳ್ಳುತ್ತದೆ. ಅದೇ ಇಲ್ಲದಿದ್ದರೆ ಈ ಪ್ರಪಂಚದಲ್ಲಿ ಯಾರು ಜೀವಿಸಲು ಸಾಧ್ಯವಾಗುತಿರಲಿಲ್ಲ. ಹಾಗಾದರೆ ಈ ಉಸಿರಾಡುವ ಶಕ್ತಿಯನ್ನು ಒಂದು ಜೀವಿಗೆ ಯಾರು ಕೊಟ್ಟಿದ್ದಾರೆ ಹೇಳಿರಿ?. ಸಂದೇಹವಿಲ್ಲ, ನಿಶ್ಚಯವಾಗಿಯೂ ಸರ್ವಶಕ್ತನಾಗಿರುವ ಸೃಷ್ಟಿಕರ್ತನೇ ಈ ಕಾರ್ಯಕ್ಕೆ ಕಾರಣವಾಗಿದ್ದಾನೆ. ಅವನು ಈ ವಿಶ್ವವನ್ನೆಲ್ಲಾ ವಿಸ್ತೀರ್ಣಕ್ಕೆ ತಂದ ಸರ್ವಶಕ್ತನು.

ಮಗುವಿಗೆ ಜನ್ಮ ನೀಡಿ, ಆ ಮಗುವಿಗೆ ಉಸಿರಾಡುವ ಶಕ್ತಿಯುಕ್ತಗಳನ್ನು ನೀಡುವವನು ಅವನೇ. ಆ ಚಿಕ್ಕ ಶ್ವಾಸವೇ ಇಲ್ಲದಿದ್ದರೆ ಯಾವುದೇ ಮಗುವು ಈ ಲೋಕದಲ್ಲಿ ಬದುಕಲು ಸಾಧ್ಯವಿಲ್ಲ. ಪ್ರತಿಯೊಬ್ಬ ಮನುಷ್ಯ ಮತ್ತು ಪ್ರತಿಯೊಂದು ಜೀವಿಗಳಲ್ಲಿ ನಡೆಯುವ ಕ್ರಿಯೆಗಳಲ್ಲಿ ಅತ್ಯಂತ ಪ್ರಧಾನವಾಗಿರುವುದೇ ಈ ಶ್ವಾಸ ಪ್ರಕ್ರಿಯೆ. ಅದೇ ಇಲ್ಲದಿದ್ದರೆ ಜೀವಿಗಳು ಮರಣಕ್ಕೆ ಸನಿಹವಾಗಲು ಸ್ವಲ್ಪ ಕ್ಷಣ ಸಾಕು.

ಗಾಳಿಯನ್ನು ತೆಗೆದುಕೊಂಡು ಉಸಿರಾಡಬೇಕೆಂದು ನಾವು ಸಂಕಲ್ಪನೆ ಮಾಡುವುದಿಲ್ಲ. ಅದರಲ್ಲಿ ನಮ್ಮ ಪ್ರಮೇಯವೇನೂ ಇಲ್ಲ. ನಮ್ಮ ಪ್ರಮೇಯವಿಲ್ಲದಯೇ ಅಸಂಕಲ್ಪಿತವಾಗಿ ಮಾನವರಾಗಿರುವ ನಾವು ಅನುಕ್ಷಣ ಗಾಳಿಯನ್ನು ಒಳಗಡೆ ತೆಗೆದುಕೊಂಡು ಹೊರಗಡೆ ಬಿಡುತ್ತೇವೆ. ಆಕ್ಸಿಜನ್ ಅನ್ನು ಒಳಗಡೆ ತೆಗೆದುಕೊಂಡು ಕಾರ್ಬನ್ ಡೈ ಆಕ್ಸೈಡ್ ಅನ್ನು ಹೊರಬಿಡುವ ಈ ಪ್ರಕ್ರಿಯೆಯು ನಮ್ಮ ಇಷ್ಟಾಯಿಷ್ಟಗಳಿಗೆ ಸಂಬಂದವಿಲ್ಲದಂತೆ ನಡೆದು





ಹೋಗುತ್ತದೆ. ನಿಜ ಹೇಳಬೇಕಾದರೆ ಈ ಪ್ರಕ್ರಿಯೆಯು ಸೃಷ್ಟಿಕರ್ತನ ಆಜ್ಞೆಗೆ ಅನುಸಾರವಾಗಿ ನಡೆಯುತ್ತವೆ. ಜೀವನ ಮರಣಗಳು ಅವನ ಯಲ್ಲಿವೆ. ಮ್ಮ ಯಲ್ಲಿ ಎನೂ ಇಲ್ಲ. ನಕ್ಷತ್ರ ಮಂಡಲಗಳು, ಈ ವಿಶ್ವದೊಳಗಿರುವ ಸಮಸ್ತ ವಿಷಯಗಳು ಅವನ ಆಜ್ಞೆಗಳಿಗೆ ಶಿರಬಾಗುತ್ತಿವೆ.

ಸೃಷ್ಟಿಕರ್ತನು ನಮಗೆ ಜೀವವನ್ನು ಕೊಟ್ಟನು! ನಮ್ಮ ಜೀವನಕ್ಕೆ ಆವಶ್ಯವಾಗಿರುವ ಪ್ರತಿಯೊಂದು ವಸ್ತುವನ್ನು ನೀಡಿದ್ದಾನೆ. ಅದಕ್ಕಾಗಿ ನಾವು ಅವನಿಗೆ ಕೃತಜ್ಞರಾಗಿ, ಆತ್ಮಾರ್ಪಿತರಾಗಿ ಅವನ ಮಾರ್ಗದ ಕಡೆಗೆ ಹೋಗುವ ವಿಧಿಯನ್ನು ಸಹ ನಿರ್ವಹಿಸಲಾರಿವೇ?

**ನಿರ್ವಹಿಸುತ್ತೇವೆ.......**

**ನಿರ್ವಹಿಸುವವರಾಗಬೇಕು...**

**ತಪ್ಪದೇ ನಿರ್ವಹಿಸಬೇಕು...**

ಇದು ಮಾನವನ ಪ್ರಪ್ರಥಮ ಕರ್ತವ್ಯ ಹಾಗೂ ಜೀವನದ ಮೊಟ್ಟ ಮೊದಲ ವಿಧಿ.

ಹಾಗಾದರೆ ಅವನಿಗೆ ಕೃತಜ್ಞತೆಯನ್ನು ಸಲ್ಲಿಸುವುದು ಹೇಗೆ? ನಾವು ಮೊದಲು ಅವನ ಶಕ್ತಿಮಾನ್ಯತೆಯನ್ನು ಅಂಗಿಕರಿಸಬೇಕು. ಅನಂತಮಯನಾಗಿರುವ ಅವನ ಬಲಾಧಿಕ್ಯತದ ಮುಂದೆ ವಿನಮ್ರವಾಗಿ ಶಿರಬಾಗಬೇಕು. ನಂತರ ಅವನನ್ನು ಸಂಪೂರ್ಣವಾಗಿ ಸತ್ಯವಾಗಿರುವ ಭಾವನೆಯಿಂದ ಗುರುತಿಸಬೇಕು. ಹೀಗೆ ಮಾಡಬೇಕಾದರೆ ದೇವಭಾವನೆ ನಮ್ಮ ಕಣ್ಣು ಮುಂದೆ ಸ್ಪಷ್ಟವಾಗಿ ಇರಬೇಕಲ್ಲವೇ! ಅದಕ್ಕಾಗಿ ವಿವಿಧ ಧರ್ಮಗಳಲ್ಲಿರುವ ದೈವಿಕ ಗ್ರಂಥದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ "ವಾಸ್ತವ ದೇವ " ಭಾವನೆಯನ್ನು ನಾವು ಅರ್ಥಮಾಡಿಕೊಳ್ಳಬೇಕು.

ವಾಸ್ತವ ದೇವಭಾವನೆಯ ಪ್ರಕಾರ ದೇವನೊಬ್ಬನೇ. ಸೃಷ್ಟಿ ಪ್ರಕ್ರಿಯೆಯಲ್ಲಿ ಅವನಿಗೆ ಭಾಗಿಧಾರರು ಯಾರು ಇಲ್ಲ. ಮಾನವನ ಸನ್ಮಾರ್ಗಕ್ಕಾಗಿ ಈ ಭೂಮಿಯ ಮೇಲೆ ಬಂದಂತಹ ವಿಕ ಗ್ರಂಥಗಳು ಮುಗ್ದ ಕಂಠದಲ್ಲಿ ಈ ವಿಷಯವನ್ನು ತುಂಬಾ ಸ್ಪಷ್ಟವಾಗಿ ವಿವರಿಸಿವೆ.

ವೇದಗಳಲ್ಲಿಯೂ ಈ ವಿಷಯದ ಕುರಿತು ತುಂಬಾ ಸ್ಪಷ್ಟವಾಗಿ ಪ್ರಸ್ತಾವಿಸಲ್ಪಟ್ಟಿದೆ.

**"ಏಕಂ ಬ್ರಹ್ಮಂ, ದ್ವಿತಿಯ ನಾಸ್ತಿ, ನೆಹೆನ್ ನಾಸ್ತಿ ಕಿಂಚನ್"**

ಇದರ ಅರ್ಥ....

**"ದೇವನು ಒಬ್ಬನೇ, ಎರಡನೇಯವನು ಇಲ್ಲ, ಇಲ್ಲವೇ ಇಲ್ಲ ಸ್ವಲ್ಪವೂ ಇಲ್ಲ."**

ಹಿಂದು ಮತದೊಳಗಿರುವ **ಬ್ರಹ್ಮಸೂತ್ರವು** ದೇವನೊಬ್ಬನೇ ಎಂಬ ವಾಸ್ತವಿಕತೆಯನ್ನು ಸ್ಪಷ್ಟವಾಗಿ ಹೇಳುತ್ತದೆ.

ಇನ್ನೂ ಈ ಕೆಳಗೆ ತಿಳಿಸಲ್ಪಟ್ಟಿರುವ ಉಪನಿಷತ್ ನಲ್ಲಿರುವ ಸೂಕ್ತಗಳು ಮೇಲಿರುವ ಸೂತ್ರಕ್ಕೆ ಸಜೀವ ಸಾಕ್ಶ್ಯಗಳು.

**" ಏಕಮೇವಾದ್ವಿತೀಯಮ್"**

**"ಅವನು ಎಕನು ದ್ವೀತಿಯನಿಲ್ಲದವನು"** (ಛಾಂದೋಗ್ಯ ಉಪನಿಷತ್ 6:2:1)

ಉಪನಿಷತ್ತನಲ್ಲಿರುವ ಇನ್ನೊಂದು ವಾಕ್ಯ ಹೀಗೆ ಹೇಳುತ್ತದೆ..

**"ನ ಚಾಸ್ಯಕಶ್ಚಿಜ್ಜನಿತಾ ನ ಛಾದಿಪಃ"**

" ಅವನಿಗೆ ತಂದೆಯಾಗಲಿ, ತಾಯಿಯಾಗಲಿ ಇಲ್ಲ, ಅವನಿಗೆ ಪ್ರಭುವು ಇಲ್ಲ"

(ಶ್ವೆತಾಶತರೂಪನಿಷತ್ 6:9/ 32:3)

ಉಪನಿಷತ್ ನಲ್ಲಿರುವ ಇನ್ನೊಂದು ಸೂಕ್ತಿ ವಿಶ್ವದ ಪ್ರಭುವಿನ ಏಕತ್ವದ ಬಗ್ಗೆ ತಿಳಿಸುತ್ತದೆ.

**"ನ ತಸ್ಯ ಪ್ರತಿಮ ಅಸ್ತಿ"**

"ಅವನಿಗೆ ಸರಿ ಸಮಾನವಾದ ರೂಪವು ಯಾವುದು ಇಲ್ಲ" (ಶ್ವೆತಾಶತರೂಪನಿಷತ್ 4:19)

**ಬೈಬಿಲ್** ಗ್ರಂಥವು ಸಹ ಎಕದೇವ ಭಾವನೆಗೆ ಒತ್ತು ನೀಡುತ್ತದೆ. **ಬೈಬಿಲ್** ನ ಹೊಸ ಒಡಂಬಡಿಕೆಯಲ್ಲಿ ಹೀಗೆ ಪ್ರಸ್ತಾವಿಸಲ್ಪಟ್ಟಿದೆ.

**"ನೀವು ಭೂಮಿಯ ಮೇಲೆ ಯಾರನ್ನು ನಮ್ಮ ತಂದೆ (ದೇವನು) ಎಂದು ಕರೆಯಬೇಡಿರಿ ನಿಮ್ಮ ತಂದೆ (ದೇವನು) ಒಬ್ಬನೇ ಅವನು ಪರಲೋಕದಲ್ಲಿದ್ದಾನೆ."** (ಮತ್ತಾಯಿ 23:9)

ಇನ್ನೊಂದು ಸೂಕ್ತಿಯಲ್ಲಿ ಈ ರೀತಿ ಹೇಳಲಾಗಿದೆ.

**"ಹೀಗಿರುವಾಗ ನೀವು ದೇವನನ್ನು ಯಾರಿಗೆ ಹೋಲಿಸುತ್ತೀರಿ ಯಾವ ರೂಪವನ್ನು ಅವನಿಗೆ ಸಮ ಮಾಡುತ್ತೀರಿ?"** (**ಬೈಬಿಲ್** ಯೆಶಾಯಿ 40:18)

ನಿಜ ದೇವನ ರೂಪವನ್ನು ಊಹಿಸುವುದು ಮನುಷ್ಯನಿಂದ ಸಾಧ್ಯವಿಲ್ಲವೆಂದು ಇನ್ನೊಂದು ವಾಕ್ಯ ಹೀಗೆ ಹೇಳುತ್ತದೆ.

**"ನೀವು ಎಂದಾದರೂ ಅವನ ಧ್ವನಿಯನ್ನು ಕೇಳಿದ್ದು ಇಲ್ಲ, ಅವನ ರೂಪವನ್ನು ನೋಡಿದ್ದು ಇಲ್ಲ."** (ಯೊಹೋನ 5:37)





ಇನ್ನೂ ದೇವನ ಅಂತಿಮ ಗ್ರಂಥವಾಗಿರುವ "ಸುವ್ಯಕ್ತ ಖುರಆನ್" ಸಹ ಅತ್ಯಂತ ಸುಲಭವಾಗಿರುವ ಮಾತಿನಲ್ಲಿ ವಾಸ್ತವ ದೇವಭಾವನೆಯ ಬಗ್ಗೆ ಈ ರೀತಿ ತಿಳಿಸುತ್ತದೆ.

**"ಹೇಳಿರಿ, ನಿಜವಾದ ಆರಾಧ್ಯನು ಒಬ್ಬನೇ. ನಿಜವಾದ ಆರಾಧ್ಯನು ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ ಅವನು ಯಾರ ಸಂತಾನವೂ ಅಲ್ಲ, ಮತ್ತು ಅವನಿಗೆ ಸರಿಸಮಾನರು ಯಾರು ಇಲ್ಲ."** (ಖುರಆನ್112:1-4)

ಈ ರೀತಿ ನಾವು ಮೊದಲು ದೇವನು ಒಬ್ಬನೇ ಎಂದೂ, ಆ ಒಬ್ಬ ದೇವನನ್ನು ಬಿಟ್ಟು ಬೇರೆ ದೇವನು ಇಲ್ಲ ಎನ್ನುವ ವಾಸ್ತವ ಅಭಿಪ್ರಾಯಕ್ಕೆ ಬರಬೇಕು. ಆ ಒಬ್ಬ ನೈಜ ದೇವನಿಗೆ ನಮ್ಮ ಆರಾಧನೆಗಳನ್ನು ಅರ್ಪಿಸಬೇಕು. ಅವನು ಬಿಟ್ಟು ಬೇರೆ ಯಾವುದೇ ವಸ್ತುವು ನಮ್ಮ ಆರಾಧನೆಗೆ ಅರ್ಹವಾಗಿಲ್ಲ ಎಂಬ ಸತ್ಯವನ್ನು ಗ್ರಹಿಸಬೇಕು. ಸೃಷ್ಟಿಕರ್ತನನ್ನು ಬಿಟ್ಟು ಇತರರನ್ನು ಆರಾಧಿಸುವ ವ್ಯಕ್ತಿಯು ಅಂಧಕಾರದಲ್ಲಿ ಇದ್ದಾನೆಂದು ಅವನು ಭ್ರಷ್ಟಮಾರ್ಗದ ಕಡೆಗೆ ಪಯಣಿಸುತ್ತಿದ್ದಾನೆಂದು ಅರಿಯಬೇಕು.

ಸೃಷ್ಟಿರಾಶಿಗಳನ್ನು ಪೂಜೆ ಮಾಡುವವರು ಮಾರ್ಗಭ್ರಷ್ಟರೆಂದು ವೇದಗಳು ಖಡಾ ಖಂಡಿತವಾಗಿ ಹೇಳಿವೆ. ಈ ಭೂಮಿಯ ಮೇಲೆ ಸೃಷ್ಟಿಕರ್ತನನ್ನು ಬಿಟ್ಟು ಪ್ರಕೃತಿ ಯಲ್ಲಿರುವ ವಸ್ತುಗಳನ್ನು ಪೂಜೆ ಮಾಡುವವರಿಗೆ ಯರ್ಜುವೇದ ಮಂತ್ರ ಈ ರೀತಿ ಹೆಚ್ಚರಿಸುತ್ತದೆ.

**"ಅಂಧಃ ತಮಃ ಪ್ರವಿಷನ್ತಿ ಯೆ ಅಸಂಭೂತಿ ಮುಪಸ್ತೆ"**

**"ಯಾರಾದರೂ ಪ್ರಾಕೃತಿಕ ವಸ್ತುಗಳು (ನೀರು, ಗಾಳಿ, ಮುಂತಾದವು ಗಳನ್ನು ಪೂಜಿಸುತ್ತಾರೋ ಅವರು ಅಂದಕಾರ(ನರಕ) ದಲ್ಲಿ ಪ್ರವೇಶಿಸುತ್ತಾರೆ. ಯಾರಾದರೂ ಸಂಭೂತಿ ಸೃಷ್ಟಿಗಳು (ಮಾನವನ ಹಸ್ತದಿಂದ ತಯಾರಿಸಲ್ಪಟ್ಟ ವಸ್ತುಗಳನ್ನು, ಶಿಲ್ಪಿಗಳನ್ನು) ಪೂಜಿಸುತ್ತಾರೋ ಅವರು ಅದಕ್ಕಿಂತ ಹೆಚ್ಚಿನ ಕುರುಡುಗತ್ತಲೆಯಲ್ಲಿ ಪ್ರವೇಶಿಸುತ್ತಾರೆ.** (ಯರ್ಜುವೇದ 40:9)

ಯರ್ಜುವೇದ ಇನ್ನೂಂದು ಕಡೆ ಈ ರೀತಿ ಹೇಳುತ್ತದೆ.

"ಸರ್ವಾಂತರ್ಯಾಮಿ ಆಗಿರುವ ದೇವನಿಗೆ ಬದಲು ಶಾಶ್ವತ ಪ್ರಕೃತಿ ಯನ್ನು **ಪ್ರಪಂಚದ ಭೌತಿಕ ವಸ್ತುಗಳನ್ನು ಪೂಜೆ ಮಾಡುವವರ ಸುತ್ತಲೂ ಅಂದಕಾರವಿದೆ ಇನ್ನೂಂದು ಮಾತಿನಲ್ಲಿ ಹೇಳಬೇಕಾದರೆ ಅವರು ಅಜ್ಞಾನದಲ್ಲಿ ಮುಳುಗಿದ್ದಾರೆ. ದುಃಖ ಸಮುದ್ರದ ಕೆಳಮಟ್ಟದಲ್ಲಿ ಸಿಲುಕಿಕೂಂಡಿದ್ದಾರೆ. ಇನ್ನೂ ನೈಜದೇವನನ್ನು ಬಿಟ್ಟು**

ಪ್ರಕೃತಿ ಯಿಂದ ಹುಟ್ಟಿದ, ಕಣ್ಣಿಗೆ ಕಾಣಿಸುವ ಭೂಮಿ, ಗಿಡ (ಮಾನವ ಇಲ್ಲ ಇತರ) ದೇಹಗಳನ್ನು ಮುಂತಾದವುಗಳನ್ನು ಪೂಜಿಸುವವರು ಇನ್ನಷ್ಟು ಅಂದಕಾರದಲ್ಲಿ ಇದ್ದಾರೆ. ಇನ್ನೊಂದು ಮಾತಿನಲ್ಲಿ ಹೇಳಬೇಕಾದರೆ ಅವರು ಮಹಾ ಮೂರ್ಖರು ಅವರು ಭಯಂಕರವಾದ ನರಕದಲ್ಲಿ ಬೀಳುತ್ತಾರೆ. ಅವರು ಅದರಲ್ಲಿ ಸುಧೀರ್ಘ ಕಾಲದವರೆಗೂ ದುಃಖವನ್ನು, ನೋವನ್ನು, ಕಷ್ಟಗಳನ್ನು ಅನುಭವಿಸುತ್ತಾ ಇರುತ್ತಾರೆ."

(ಯರ್ಜುವೇದ 40:9)

ಈ ಭೂಮಿಯ ಮೇಲೆಲ್ಪಟ್ಟ ದೇವನ ಅಂತಿಮ ಗ್ರಂಥವಾದ "ಸುವ್ಯಕ್ತ ಖುರಆನ್" ಸಹ ಈ ವಿಷಯವನ್ನೇ ಸ್ಪಷ್ಟಪಡಿಸುತ್ತದೆ.

**"ಭೂಮಿ ಆಕಾಶಗಳ ಒಡೆಯನು ಅವನೇ, ಅವನು ಯಾರನ್ನು ಸಂತಾನವಾಗಿ ಮಾಡಿಕೊಂಡಿಲ್ಲ, ಅವನ ರಾಜ್ಯಾಧಿಕಾರದಲ್ಲಿ ಅವನಿಗೆ ಯಾರು ಸಹಭಾಗಿ ಇಲ್ಲ, ಅವನು ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿ ಅನಂತರ ಅದಕ್ಕೊಂದು ವಿಧಿ ನಿಯಮವನ್ನು ನಿಶ್ಚಯಿಸಿದನು"** (ಖುರಆನ್ 25:2)

"ಸುವ್ಯಕ್ತ ಖುರಆನ್" ನಲ್ಲಿರುವ ಇದು ವಚನ ಈ ರೀತಿ ಹೇಳುತ್ತದೆ

**"ಜನರು ಅವನನ್ನು ಬಿಟ್ಟು, ಯಾವ ವಸ್ತುವನ್ನು ಸೃಷ್ಟಿಸದ ಮತ್ತು ಸ್ವತಃ ಸೃಷ್ಟಿಸಲ್ಪಟ್ಟಂತಹ ವಸ್ತುಗಳನ್ನು ಆರಾಧ್ಯರನ್ನಾಗಿ ಮಾಡಿಕೊಂಡರು. ಅವು ಸ್ವತಃ ತಮಗೂ ಯಾವುದೇ ಲಾಭ ಅಥವಾ ಹಾನಿಯನ್ನುಂಟು ಮಾಡುವ ಅಧಿಕಾರ ಹೊಂದಿಲ್ಲ, ಜೀವನ ಮರಣಗಳು ಅದರ ಅಧೀನದಲ್ಲಿ ಇಲ್ಲ, ಅವು ಸತ್ತವರನ್ನು ಪುನಃ ಎಬ್ಬಿಸಲಾರವು." (ಖುರಆನ್ 25:3)**

"ಸುವ್ಯಕ್ತ ಖುರಆನ್" ಲ್ಲಿ ಇನ್ನೊಂದು ವಚನ ನಿಜ ದೇವನ ಲಕ್ಷಣಗಳ ಬಗ್ಗೆ ವಿವರಿಸಿ ಆರಾಧನೆಗೆ ಅರ್ಹನಾಗಿರುವವನು "ನೈಜದೇವನು" ಒಬ್ಬನೇ ಎಂದು ಹೇಳಿದೆ.

**"ಅಲ್ಲಾಹ್ ಚಿರಂತನು, ಸ್ವಯಂಜೀವಂತನೂ ಅಖಿಲ ಪ್ರಪಂಚದ ನಿಯಂತ್ರಕನಾದ ಅವನ ಹೊರತು ಆರಾಧ್ಯನು ಯಾರು ಇಲ್ಲ, ಅವನಿಗೆ ತೂಕಡಿಕೆಯಾಗಲೀ ನಿದ್ದೆಯಾಗಲೀ, ಭಾದಿಸುವುದಿಲ್ಲ, ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವು ಅವನದೇ ಅವನ ಸನ್ನಿದಿಯಲ್ಲಿ ಅವನ ಅಪ್ಪಣೆಯಿಲ್ಲದೆ ಶಿಫಾರಸ್ಸು ಮಾಡುವವರು ಯಾರು? ದಾಸರ ಮುಂದಿರುವದನ್ನು ಅವನೇ ಬಲ್ಲನು. ಅವರಿಂದ ಮರೆಯಾಗಿರುವುದನ್ನು ಅವನೇ ಬಲ್ಲನು. ಅತನು ಸ್ವತಃ ತಿಳಿಯಗೂಡಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನು ಅವರು ತಿಳಿಯಲಾರರು. ಅವನ ಅಧಿಕಾರವು ಆಕಾಶಗಳನ್ನು ಭೂಮಿಯನ್ನು ವ್ಯಾಪಿಸಿದೆ. ಅವುಗಳ ಸಂರಕ್ಷಣೆಯಲ್ಲಿ ಆತನಿಗೆ ದಣಿಸುವಂಥಹ ಕಾರ್ಯವಲ್ಲ ಅವನು ಎಕೈಕ ಮಹೋನ್ನತನು ಸರ್ವಶ್ರೇಷ್ಠನು."** (ಖುರಆನ್ 2:255)

**"ಆಕಾಶಗಳನ್ನು ಭೂಮಿಯನ್ನು ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನು ಆರುದಿನಗಳಲ್ಲಿ ಸೃಷ್ಟಿಸಿ, ಅನಂತರ ವಿಶ್ವಸಿಂಹಾಸನರೂಡನಾದವನು ಅಲ್ಲಾಹನೇ. ಅವನ ಹೊರತು ನಿಮಗೆ ಯಾರು ರಕ್ಷಕ ಮಿತ್ರನೂ ಇಲ್ಲ ಅವನ ಮುಂದೆ ಶಿಫಾರಸ್ಸು ಮಾಡುವವನೂ ಇಲ್ಲ ಹೀಗಿರುತ್ತಾ ನೀವೇನು ಜಾಗೃತರಾಗಲಾರಿರಾ?."**

(ಖುರಆನ್ 32:4)

ಇದರ ಕುರಿತು ಆಲೋಚಿರಿ:

**ನಮಗೆ ಆಹಾರ ಅನುಗ್ರಹಿಸುತ್ತಿರುವವನು ಅವನೇ.**

**ಭೂಮಿಯ ಮೇಲೆ ಜೀವನ ಸಾಗಿಸಲು ಅವಸರವಾಗಿರುವ ಪ್ರತಿ ವಸ್ತುವನ್ನು ನಮಗೆ ನೀಡುತ್ತಿರುವವನು**

**ಅವನೇ. ಅವನಿಗೆ ದಾಹ ಆಗುವುದಿಲ್ಲ, ಹಸಿವು ಆಗುವುದಿಲ್ಲ,**

**ಆಹಾರ ತೆಗೆದುಕೊಂಡರೆ ಮಾತ್ರ ಅವನ ಜೀವನ ಸಾಗುತ್ತದೆ ಎಂಬ ವಿಷಯವು ಇಲ್ಲ**

ಸಾಧಾರಣವಾಗಿ ಜನರು ವಿಗ್ರಹಗಳಿಗೆ ನೈವೇದ್ಯವನ್ನು ಸಮರ್ಪಿಸುತ್ತಾರೆ. ನೈವೇದ್ಯವನ್ನು ವಿಗ್ರಹಗಳ ಮುಂದೆ ಇಟ್ಟರೆ, ದೇವತೆಗಳು ಅದನ್ನು ಸ್ವೀಕರಿಸಿ ಅನಂತರ ನಮ್ಮ ಕೋರಿಕೆಗಳನ್ನು ನೇರವೇರುಸುತ್ತವೆಂದು ಭಾವಿಸುತ್ತಾರೆ.

**ಆದರೆ ವಾಸ್ತವ ವಿಷಯವೇನಾದರೂ ನಿಮಗೆ ಗೊತ್ತೇ? ಆ ವಿಗ್ರಹಗಳು ತಿನ್ನುವುದಿಲ್ಲ, ಕನಿಷ್ಟ ಪಕ್ಷ ವಾಸನೆಯನ್ನು ತೆಗೆದುಕೊಳ್ಳಲಾರವು.**

ಧರ್ಮಗ್ರಂಥಗಳು ಮಾನವರಿಗೆ ನಿಜವಾದ ಮಾರ್ಗದರ್ಶಕಗಳು ಅವು ಇಂತಹ ಅಜ್ಞಾನ ಆಚಾರಗಳನ್ನು ಖಂಡಿಸುತ್ತವೆ. ನಿಜವಾದ ಸೃಷ್ಟಿಕರ್ತನಾದ ವಿಶ್ವಪ್ರಭುವಿಗೇ ಆರಾಧನೆಗಳನ್ನು ಅರ್ಪಿಸಬೇಕೆಂದು ಮನುಷ್ಯನಿಗೆ ತಿಳಿ ಹೇಳುತ್ತವೆ. ಮಾನವನ ಮಾತಿನ ಭಾವನೆಗಳಿಗೆ, ತತ್ವಗಳಿಗೆ ಪ್ರಭಾವಿತನಾಗಿ ಭ್ರಷ್ಟಮಾರ್ಗದಲ್ಲಿ ಬೀಳಬಾರದೆಂದು ಅಪನಂಬಿಕೆಯ ಜೊತೆಗೆ ಮೂಡನಂಬಿಕೆಯ ಶೈಲಿಯಲ್ಲಿ ಜೀವಿಸಬಾರದೆಂದು ಧರ್ಮಗ್ರಂಥಗಳು ಬೋಧಿಸುತ್ತವೆ.

ಮನುಷ್ಯ ಸನ್ಮಾರ್ಗದಲ್ಲಿ ನಡೆಯಬೇಕು, ಅವನು ಭೂಮಿಯ ಮೇಲೆ ದೇವನು ಸೂಚಿಸಿದ ಋಜುವಾದ ಮಾರ್ಗದಲ್ಲಿಯೇ ಜೀವಿಸಬೇಕು. ಈ ಕಾರಣದಿಂದಲೇ ಧರ್ಮಗ್ರಂಥಗಳು ಅವತರಿಸಿವೆ. ದೇವನ ಆಜ್ಞೆಯ ಪ್ರಕಾರ ನಿಯಮಿಸಲ್ಪಟ್ಟ ಪ್ರವಾದಿಗಳು ಸಹ ಧರ್ಮ


ಧರ್ಮ ಸ್ಥಾಪನೆಗಾಗಿ, ಸತ್ಯಶೋಧನೆಗಾಗಿ ಸದಾ ಪ್ರಯತ್ನಿಸುತ್ತಿರಬೇಕು

ಗ್ರಂಥದಲ್ಲಿರುವ ಸಂದೇಶವನ್ನು ಪ್ರಚಾರ ಮಾಡಿದರು. ಪ್ರವಾದಿಗಳು ಸಾಮಾನ್ಯ ಪ್ರಜೆಗಳಿಗೆ ಜೀವನ ವಾಸ್ತವಗಳನ್ನು ಸೃಷ್ಟಿನಿಜಗಳನ್ನು ಭೋದಿಸುವುದರಲ್ಲಿ ಈ ಗ್ರಂಥಗಳು ತುಂಬಾ ಸಹಕರಿಸಿದವು. ಆ ಧರ್ಮ ಗ್ರಂಥಗಳ ಭೋದನೆಗೆ ಅನುಗುಣವಾಗಿ ನಡೆದುಕೊಳ್ಳುವವನೇ ಇಹ ಪರಲೋಕದಲ್ಲಿ ವಿಜಯ ಸಾಧಿಸಬಲ್ಲನು. ಇದುವೇ ಇಹ-ಪರ ಲೋಕಗಳ ಮುಕ್ತಿಗೆ ಎಕೈಕಮಾರ್ಗವಾಗಿದೆ.

## ಹಾಗಾದರೆ ಧರ್ಮಗ್ರಂಥಗಳು ತೋರಿಸುವ ಮಾರ್ಗದಲ್ಲಿ ಜೀವನ ನಡೆಸಬೇಕೆಂಬ ಅವಸರವೇನೆಂದು ಕೇಳುತ್ತೀರಾ?

ನಿತ್ಯ ಜೀವನದಲ್ಲಿ ನಾವು ಪ್ರತಿಯೊಂದು ವಿಷಯ ಕುರಿತು ಎಷ್ಟೋ ಯೋಚಿಸು. ಐಹಿಕ ಜೀವನಕ್ಕೆ ಸಂಬಂಧಿಸಿ ಏನಾದರೂ ನಿರ್ಣಯ ತೆಗೆದುಕೊಳ್ಳಬೇಕಾದರೆ ಒಂದು ಬಾರಿ ಅಲ್ಲದೇ ಅದೆಷ್ಟೊ ಬಾರಿ ಆ ವಿಷಯದ ಬಗ್ಗೆ ಪರಿಶೀಲಿಸಿಕೊಳ್ಳುತ್ತೇವೆ. ಅದಕ್ಕಾಗಿ ಅವಸರವಾಗಿರುವ ಪ್ರತಿಯೊಂದು ಪ್ರದೇಶಕ್ಕೆ ಹೋಗುತ್ತೇವೆ. ಆ ರಂಗಕ್ಕೆ ಸೇರಿದ ನಿಪುಣರ ಹತ್ತಿರ ಸಲಹೆಗಳನ್ನು ತೆಗೆದುಕೊಳ್ಳುತ್ತೇವೆ. ಪ್ರಾಪಂಚಿಕ ವಿಷಯದಲ್ಲಾದರೆ ನಾವು ತುಂಬಾ ಜಾಗಕತೆಯಿಂದಿರುತ್ತೇವೆ.

ಆದರೆ ದುರದೃಷ್ಟವೇನೆಂದರೆ ಆಧ್ಯಾತ್ಮಿಕ ಜೀವನದ ವಿಷಯದಲ್ಲಿ ನಾವು ನಿರ್ಲಕ್ಷ್ಯ ಮಾಡುತ್ತೇವೆ. ಈ ವಿಷಯಕ್ಕೆ ತುಂಬಾ ಕಡಿಮೆ ಪ್ರಾಮುಖ್ಯತೆ ನೀಡುತ್ತೇವೆ. ಎಲ್ಲಾ ದಿವ್ಯಗ್ರಂಥಗಳಲ್ಲಿ "**ಪರಲೋಕ ಜೀವನದ**" ಬಗ್ಗೆ ಪ್ರಸ್ತಾವಿಸಲ್ಪಟ್ಟಿದೆ.

ಸರ್ವಶಕ್ತನಾಗಿರುವ ದೇವನಮಗೆ ಆಲೋಚಿಸುವುದಕ್ಕೆ ಬುದ್ದಿಯನ್ನು ನೀಡಿದ್ದಾನೆ. ಅವನು ಯಾವುದೇ ವಿಷಯವನ್ನು ಯೋಚಿಸಿ ದೃಡವಾದ ನಿರ್ಣಯವನ್ನು ತೆಗೆದುಕೊಳ್ಳುವ ತಿಳುವಳಿಕೆಯನ್ನು ಅನುಗ್ರಹಿಸಿದ್ದಾನೆ. ಅವನು ಈ ವಿಶ್ವವನ್ನೆಲ್ಲಾ ಸೃಷ್ಟಿಸಿದನು. ಮಾನವರನ್ನು ಪರೀಕ್ಷಿಸುವುದಕ್ಕಾಗಿ ಅವರನ್ನು ಈ ಭೂಮಿಯ ಮೇಲೆ ವಾಸಿಸುವಂತೆ ಮಾಡಿದನು.

ಆ ಎಕ ಪ್ರಭುವು ನಿರ್ಮಿಸಿರುವ ಈ ವಿಶ್ವದಲ್ಲಿ ಒಂದೇ ರೀತಿಯ ಪ್ರಕೃತಿ ನಿಯಮಗಳನ್ನು ಸರ್ವವ್ಯಾಪ್ತಿಯಾಗಿವೆ. ಒಂದು ಸಲ ಅದರ ಕುರಿತು ಯೋಚಿಸಿರಿ. ನಮ್ಮನ್ನು ಸೃಷ್ಟಿಸಿದ ದಿನದಿಂದ ಸೂರ್ಯನು, ಚಂದ್ರನು, ಭೂಮಿ ಒಂದು ಕ್ಷಣ ನಿಲ್ಲದಿರ ಸುತ್ತುತ್ತಿವೆ. ಅವು ತಮ್ಮ ಕಕ್ಷೆಗಳನ್ನು ಎಂದೂ ಸಹ ತಪ್ಪಿಲ್ಲ. ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಮುಳುಗುವುದು ಸೂರ್ಯನ ವಿಧಿ. ಅದು ಎಂದು ಸಹ ತನ್ನ ವಿಧಿಯನ್ನು ಅತಿಕ್ರಮಿಸಿಲ್ಲ. ಹಾಗೆಯೇ ಅಂತರಿಕ್ಷದಲ್ಲಿರುವ ಗ್ರಹಗಳು, ನಕ್ಷತ್ರಗಳು ಸಹ ಕ್ರಮಬದ್ಧವಾಗಿ ನಿರ್ಮಿಸಲ್ಪಟ್ಟಿದೆ. ತಮ್ಮ ಪ್ರಭುವು ತಮಗಾಗಿ ನಿರ್ಣಯಿಸಿದ ಪ್ರಕೃತಿ ನಿಯಮಕ್ಕೆ ಅನುಗುಣವಾಗಿ ಅವು ಅನುಸರಿಸುತ್ತಿವೆ.





## ಸ್ನೇಹಿ

ಮನುಷ್ಯನ ಜನ್ಮದ ಕುರಿತು(ಅಂದರೆ ಜನ್ಮವು ಯಾವ ರೀತಿ ನಡೆಯಿತು? ಅವನು ಹೇಗೆ ಬೆಳೆದು ದೊಡ್ಡವನಾಗುತ್ತಿದ್ದಾನೆ? ಹೇಗೆ ಸಾಯಿತ್ತಿರುವನು. ಈ ವಿಷಕುರಿತು ಸ್ವಲ್ಪ ಆಲೋಚಿ. ಸೃಷ್ಟಿಯಲ್ಲಿ ಅತಿ ಮುಖ್ಯವಾಗಿರುವ ಗಾಳಿ, ನೀರು, ಅಗ್ನಿ, ಸೂರ್ಯನು, ಚಂದ್ರನು, ನಕ್ಷತ್ರಗಳು ಭೂಮಿ ಮುಂತಾದವುಗಳ ಬಗ್ಗೆ ಸ್ವಲ್ಪ ಚಿಂತಿ. ಎರಡು ರೀತಿಯಲ್ಲಿ ನೀಈ ವಿಷಯದ ಕುರಿತು ಆಲೋಚಿಸಬೇಕು.

### 1.ಕಾಲ

100 ವರ್ಷದ ಹಿಂದೆ ಹೋಗಿ ಆಲೋಚಿ. 1,000 ವರ್ಷಗಳ ಹಿಂದೆ ಹೋಗಿ ಪ್ರಕೃತಿಯನ್ನು ಪರಿಶೀಲಿ. 1,00,000 ವರ್ಷದ ಹಿಂದೆ ಹೋಗಿ ಪರಿಶೋಧಿಸೃಷ್ಟಿ ಪ್ರಾರಂಭದಿಂದ ಇಂದಿನ ಪರಿಸ್ಥಿಯ ಬಗ್ಗೆ ಸಮೀಕ್ಷಿ.

### 2.ಪ್ರದೇಶ

ಇಂಡಿಯಾ, ನೇಪಾಲ್, ಅಮೇರಿಕಾ, ಬ್ರಿಟನ್, ಅಪ್ಘಾನಿಸ್ತಾನ್, ಶ್ರೀಲಂಕ, ಚೈನಾ, ಜಪಾನ್, ಮುಂತಾದ ಪ್ರದೇಶಗಳನ್ನು ಪರಿಗಣಕ್ಕೆ ತೆಗೆದುಕೊಂಡು ಮತ್ತೇ ಆಲೋಚಿ.

. ಮೇಲೆ ತಿಳಿಸಲ್ಪಟ್ಟಂತಹ ಕಾಲಕ್ರಮದಲ್ಲಿ ಮನುಷ್ಯನ ಹುಟ್ಟು ಕ್ರಮ ಹೇಳುಕೊಳ್ಳುವಷ್ಟು ರೀತಿಯಲ್ಲಿ ಯಾವಾಗಲಾದರೂ ಬದಲಾವಣೆಗೆ ಒಳಗಾಗಿದೆಯೇ?

. ವಿವಿಧ ಪ್ರದೇಶಗಳಿಗೆ ಅನುಸಾರವಾಗಿ ಮಾನವನ ಜನ್ಮರೀತಿಯಲ್ಲಿ ಏನಾದರೂ ವ್ಯತ್ಯಾಸ ಕಾಣುತ್ತಿದೆಯಾ?

ಇದಕ್ಕೆ ನಿಮ್ಮ ಸಮಾಧಾನವಾದರೂ ಏನು?

ಹೌದೆಂದಾ?.... ಇಲ್ಲವೆಂದಾ?

ನಿಶ್ಚಯವಾಗಿ 'ಇಲ್ಲ' ಎನ್ನುವ ಸಮಾಧಾನವು ನಿಮ್ಮದಾಗಿರಬೇಕು ಏಕೆಂದರೆ ಕಾಲಕ್ಕೆ, ಪ್ರದೇಶಕ್ಕೆ ತಕ್ಕಂತೆ ಮನುಷ್ಯನ ಹುಟ್ಟುವ ಪ್ರಕ್ರಿಯೆಯು ಯಾವಾಗಲು ಒಂದೇ ರೀತಿ ಇರುತ್ತದೆ.

ಮನುಷ್ಯ ತನ್ನ ತಾಯಿ ಗರ್ಭದಿಂದ ಹೊರಗಡೆ ಬಂದೊಡನೆ ಅಂತರ್ಗತ ಅವಯವಗಳಿಂದ ಮಾನವನ ದೇಹ ಬೆಳೆಯಲಾರಂಭಿಸುತ್ತದೆ. ಆದರೆ ಇಲ್ಲಿನ ಪ್ರಶ್ನೆ ಏನಂದರೆ..?

. ಮೇಲೆ ತಿಳಿಸಿದಂತೆ ಕಾಲ ವ್ಯವದಿಯಲ್ಲಿ ಗಾಳಿ, ನೀರು, ಬೆಂಕಿ ಮುಂತಾದವುಗಳ ಲಕ್ಷಣಗಳಲ್ಲಿ ಏನಾದರೂ ವ್ಯತ್ಯಾಸ ಇದೆಯಾ?

. ಮೇಲೆ ತಿಳಿಸಿರುವಂತೆ ವಿವಿಧ ಪ್ರದೇಶದಲ್ಲಿ ಗಾಳಿ, ನೀರು ಬೆಂಕಿಗಳ ಲಕ್ಷಣಗವಿವಿಧ ರೀತಿಯಲ್ಲಿ ಇದೆಯಾ?

ಇದಕ್ಕೆ ನಿಮ್ಮ ಸಮಾಧಾನವಾದರೂ ಏನೂ?

ಹೌದೆಂದಾ...? ಇಲ್ಲವೆಂದಾ...?

ನಿಶ್ಚಯವಾಗಿ "ಇಲ್ಲ" ಎನ್ನುವ ಸಮಾಧಾನ ನಿಮ್ಮದಾಗಿರಬೇಕು ಎಕೆಂದರೆ ಕಾಲಗಳು, ಪ್ರದೇಶಗಳು ಯಾವುದಾದರೂ ನಾವು ಉಪಯೋಗಿಸುವ ಗಾಳಿ, ನೀರು, ಅಗ್ನಿ ಎಲ್ಲವೂ ಒಂದೇ ಆಗಿದೆ. ಸೂರ್ಯನು ಬದಲಾಗಲಿಲ್ಲ.(ಅಂದರೆ ಭೂಮಿಗೆ ಸೂರ್ಯನ ನಡುವೆ ಇರುವ ದೂರವು ಬದಲಾಗಲಿಲ್ಲ ಮತ್ತು ಚಂದ್ರನಿಗೆ ಸೂರ್ಯನ ನಡುವೆ ದೂರ ಬದಲಾಗಲಿಲ್ಲ) ಹಾಗೆಯೇ ಚಂದ್ರನು ಸಹ ಬದಲಾಗಿಲ್ಲ. ಅಂದರೆ ಭೂಮಿಯ ಸುತ್ತ ಚಂದ್ರನು ಸುತ್ತುತ್ತಿರುವುದು ಬದಲಾಗಲಿಲ್ಲ ಸೂರ್ಯನ ಸುತ್ತ ಭೂಮಿಯು ಸುತ್ತುವುದು ಬದಲಾಗಲಿಲ್ಲ. ಸೂರ್ಯ, ಚಂದ್ರ ಗ್ರಹಗಳು ಆಗುವುದು ನಿಲ್ಲಲಿಲ್ಲ.

. ಯಾವುದೇ ಯುಗದಲ್ಲಾದರೂ ಇವುಗಳಲ್ಲಿ ಯಾವುದೇ ಬದಲಾವಣೆಗಳು ಸೇರಿಕೊಂಡಿದೆಯೇ?

. ಪ್ರದೇಶಗಳ ಅನುಸಾರವಾಗಿ ಇವುಗಳಲ್ಲಿ ಬದಲಾವಣೆಗಳು ಕಾಣಿಸುತ್ತಿವೆಯಾ?

ಇದಕ್ಕೆ ನಿಮ್ಮ ಸಮಾಧಾನವಾದರೂ ಏನೂ?

ಹೌದೆಂದಾ...? ಇಲ್ಲವೆಂದಾ..? ನಿಶ್ಚಯವಾಗಿ ನಿಮ್ಮ ಸಮಾಧಾನವು "ಇಲ್ಲ" ವೆಂದಾರಬೇಕು.

**<u>ಕಾರಣವೇನೆಂದರೆ.</u>**

1. ಸೂರ್ಯ, ಚಂದ್ರ, ಭೂಮಿ ಅವುಗಳ ಭ್ರಮಣಗಳು ಕಾಲಕ್ರಮವಾಗಿ ಬದಲಾಗುತ್ತಾ ಬರುತ್ತಿರುವುದಾದರೆ ನಮ್ಮ ತಾತ--ಮುತ್ತಾತಗಳ ಸಮಯದ ಗಣನೆಗೆ ಈ ಕಾಲದ ಸಮಯದ ಗಣನೆಗಳ ಮದ್ಯೆ ತುಂಬಾ ವ್ಯತ್ಯಾಸವಿರುತ್ತಿತ್ತು. ಸೆಕೆನ್ಸ್, ನಿಮಿಷಗಳು, ಗಂಟೆಗಳ ಸಂಖ್ಯೆಯಲ್ಲಿ ಆ ಕಾಲಕ್ಕೆ ಈ ಕಾಲಕ್ಕೆ ಹೋಲಿಕೆಯೇ ಇರುವುದಿಲ್ಲ. ನಮ್ಮ ಸೆಕೆನ್ಸ್, ಸಂಖ್ಯೆಗೆ ನಮ್ಮ ತಾತಂದಿರ ನಿಮಿಷದ ಸಂಖ್ಯೆಗೆ ಹಾಗೂ ಗಂಟೆಗಳ ಸಂಖ್ಯೆಗಳ ನಡುವೆ ಗಿನ ಕಾಲಕ್ಕೆ ಈಗಿನ ಕಾಲಕ್ಕೆ ತುಂಬಾ ವ್ಯತ್ಯಾಸವಿರುತ್ತಿತ್ತು.





2. ಸೂರ್ಯ ಚಂದ್ರ, ಭೂಮಿ ಅವುಗಳ ಭ್ರಮಣಗಳು ಪ್ರದೇಶಗಳ ಅನುಸಾರವಾಗಿ ಬದಲಾಗುತ್ತಿರುವುದಾದರೇ ನಮ್ಮ ದೇಶದಲ್ಲಿ ನಿಮಿಷಕ್ಕೆ ಅರವತ್ತು ಸೆಕೆನ್ಸ್, ಗಂಟೆಗೆ ಅರವತ್ತು ನಿಮಿಷ ಇದ್ದರೆ ಬೇರೆ ದೇಶದಲ್ಲಿ ಬೇರೆ ರೀತಿ ಇರುತಿತ್ತು.

ಆದರೆ ಕಾಲಗಳು, ಪ್ರದೇಶಗಳ ಅನುಸಾರವಾಗಿ ನಮ್ಮೆಲ್ಲರಿಗೆ ಈ ಸಂಖ್ಯೆಗಳು ಒಂದೇ ರೀತಿ ಇರುತ್ತವೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಇದನ್ನು ಸೃಷ್ಟಿಸಿದ ದೇವನು ಅಂದಿಗೂ, ಇಂದಿಗೂ, ಎಂದೆಂದಿಗೂ ಒಬ್ಬನೇ, ಅವನೇ ನಿಜವಾದ ದೇವನು ನಮ್ಮ ಆರಾಧನೆಗೆ ಅರ್ಹನಾಗಿರುವವನು ಅವನೊಬ್ಬನೇ. ಸೃಷ್ಟಿ ಇದುವರೆಗೂ ಅವನ ಅಸ್ತಿತ್ವದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ.

ಪ್ರಕೃತಿ ಯ ಕುರಿತು ಯೋಚಿಸಿ, ಸತ್ಯವನ್ನು ಗ್ರಹಿಸಬೇಕೆಂದು ಎಲ್ಲಾ ದಿವ್ಯಗ್ರಂಥಗಳಲ್ಲಿ ಪರಮ ಪ್ರಭುವು ಸ್ವಯವಾಗಿ ಪದೇ ಪದೇ ಹೇಳುತ್ತಿದ್ದಾನೆ.

ಇದರ ಕುರಿತು " ಖುರಆನ್" ಈ ರೀತಿ ಹೇಳುತ್ತದೆ.

**"ಒಂಟೆಗಳು ಹೇಗೆ ಸೃಷ್ಟಿಸಲ್ಪಟ್ಟಿವೆ" ಎಂಬುದನ್ನು ಇವರು ನೋಡುವುದಿಲ್ಲವೇ?"**

**"ಪರ್ವತಗಳು ಹೇಗೆ ಸಾಗಿಸಲ್ಪಟ್ಟಿವೆ" ಎಂಬುದನ್ನು ಇವರು ನೋಡುವುದಿಲ್ಲವೇ?"**

**"ಭೂಮಿಯನ್ನು ಹೇಗೆ (ವಿಶಾಲವಾಗಿ) ಹಾಸಲಾಗಿದೆ" ಎಂಬುದನ್ನು ಇವರು ನೋಡುವುದಿಲ್ಲವೇ?"**

**"ಓ ಪ್ರವಾದಿ, ನೀಉಪದೇಶ ಮಾಡುತ್ತಾ ಸಾಗಿರಿ ನೀವು ಕೇವಲ ಉಪದೇಶಕರು"**

(**ಖುರಆನ್** 88:17-21)

ಆದರೆ ದುದೃಷ್ಟವೇನೆಂದರೆ ಮಾನವರು ಅಮಾಯಕತ್ವ ಹಾಗೂ ಅಜ್ಞಾನಕ್ಕೆ ಗುರಿಯಾಗುತ್ತಾರೆ. ಈ ಅಜ್ಞಾನವೇ ಮನುಷ್ಯನನ್ನು ಸನ್ಮಾರ್ಗದ ಕಡೆಗೆ ತಡೆದು ಭ್ರಷ್ಟ ಮಾರ್ಗದ ಕಡೆಗೆ ನಡೆಯಲು ಕಾರಣವಾಗುತ್ತದೆ..

## ನನ್ನ ಪ್ರಿಯ ಸ್ನೇಹಿತರೇ!

ಎಲ್ಲಾ ಮಾನವರ ಕ್ಷೇಮೆಯನ್ನು ಬಯಸುವ ಒಬ್ಬ ಶ್ರೇಯೋಭಿಲಾಷಿಯಾಗಿ ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದರ ಕುರಿತು ನೀವು ಮತ್ತೇ ಮತ್ತೇ ಆಲೋಚಿಸಿರಿ. ಯಾವುದೇ ಪರಿಸ್ಥಿಯಲ್ಲಿ ಸತ್ಯಕ್ಕೆ ದೂರವಾಗಬೇಡಿರಿ ಚಿಂತಿಸಿ ಸತ್ಯವನ್ನು ಗ್ರಹಿಸಬಲ್ಲ ಬುದ್ಧಿ

ಜ್ಞಾನವನ್ನು ದೇವನು ನಮಗೆ ಕೊಟ್ಟಿದ್ದಾನೆ. ಈ ಸುವ್ಯಕ್ತ ಮಾರ್ಗದರ್ಶನ ವಾಕ್ಯಗಳು ಹೇಳುತ್ತಿರುವ ನಿಜಾಂಶದ ಕುರಿತು ಸ್ವಲ್ಪ ಆಲೋಚಿಸಿರಿ ಅವುಗಳನ್ನು ಶ್ರದ್ದೆಯಾಗಿ ಓದಿರಿ. ಚೆನ್ನಾಗಿ ಅಧ್ಯಾಯನ ಮಾಡಿರಿ.. ಅವುಗಳ ಕುರಿತು ಆಳವಾಗಿ ಪರೀಶೀಲಿಸಿ.. ಸೂಕ್ಷ್ಮವಾಗಿ ಆಲೋಚಿಸಿರಿ, ಆಗ ಶಾಸ್ತ್ರೀಯವಾಗಿರುವ ಅತ್ಯಂತ ಅರ್ಥಪೂರ್ಣವಾಗಿರುವ ಒಂದು ಆಲೋಚನೆ ನಮ್ಮ ಮೆದುಳಿನ ಲೋಕದಲ್ಲಿ ಪ್ರತಿಫಲಿಸಬಹುದು. ಸತ್ಯಕ್ಕೆ ಸಂಬಂದಿಸಿದ ಚಿಕ್ಕ ಮಾರ್ಗವು ನಮ್ಮ ಅಂತರಾತ್ಮದಲ್ಲಿ ಬೆಳಗಬಹುದು.

**ಸತ್ಯವು ವಿಜಯಕ್ಕೆ ನಾಂದಿಯಾಗುತ್ತದೆ.. ಸತ್ಯದ ಸುಗುಣವೇ ಅದು! ಅಸತ್ಯವು ಅಪಜಯಕ್ಕೆ ದಾರಿ ಮಾಡಿಕೊಡುತ್ತದೆ. ಎಕೆಂದರೆ ಅಂತವು ಅಸತ್ಯದ ಗುಣವಾಗಿದೆ..**

ಈಗ ನಾವು ಇನ್ನೊಂದು ಹೆಜ್ಜೆ ಮುಂದೆ ಇಟ್ಟು ದಿವ್ಯ ಗ್ರಂಥಗಳ ಬೆಳಕಿನಲ್ಲಿ ದೇವನ ಎಕತ್ವವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸೋಣ. ಈ ಪುಸ್ತಕದಲ್ಲಿರುವ ಸಾಕ್ಷ್ಯಾಧಾರಗಳೆಲ್ಲವೂ ದಿವ್ಯಗ್ರಂಥಗಳಲ್ಲಿಂದ ದೃವಿಕರಿಸಲ್ಪಟ್ಟಿದೆ..